# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2016-17ನೇ ಸಾಲಿನ ರಾಜ್ಯದಲ್ಲಿನ ತೀವ್ರ ಬರ ಪರಿಸ್ಥಿತಿಯನ್ನು ನಿಭಾಯಿಸಲು ಉಪಯುಕ್ತ ಕೆರೆಗಳ ಹೂಳೆತ್ತಲು "ಕೆರೆ ಸಂಜೀವಿನಿ" ಯೋಜನೆಗೆ ರಾಜ್ಯ ವಿಪತ್ತು ನಿರ್ವಹಣೆ ನಿಧಿಯಿಂದ ನೀಡಿದ ಅನುದಾನವನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ರವರ ಬ್ಯಾಂಕ್ ಖಾತೆಗಳಿಗೆ ಅನುದಾನ ಬಿಡುಗಡೆ ಕುರಿತು.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:61:ಆರ್‌ಆರ್‌ಸಿ:2016, ದಿನಾಂಕ: 2-5-2016.
2. ಸರ್ಕಾರದ ಸುತ್ತೋಲೆ ಸಂಖ್ಯೆ:ಗ್ರಾಅಪ:61:ಆರ್‌ಆರ್‌ಸಿ: 2016, ದಿನಾಂಕ:5-5-2016, 10-5-2016 ಮತ್ತು 18-5-2016.
3. ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ:259:ಟಿಎನ್‌ಆರ್:2016, ದಿನಾಂಕ 06.10.2016.
4. ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ:259:ಟಿಎನ್‌ಆರ್: 2016(ಭಾ-1), ದಿನಾಂಕ 06.10.2016.
5. ಸರ್ಕಾರದ ಆದೇಶ ಸಂಖ್ಯೆ:ಆರ್‌ಡಿ:259:ಟಿಎನ್‌ಆರ್: 2016(ಭಾ-1), ದಿನಾಂಕ 29.10.2016.
6. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:159:ಆರ್‌ಆರ್‌ಸಿ:2016, ದಿನಾಂಕ: 05.12.2016.
7. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:159:ಆರ್‌ಆರ್‌ಸಿ:2016, ದಿನಾಂಕ: 02.01.2017.
8. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ:ಗ್ರಾಅಪ:159: ಆರ್‌ಆರ್‌ಸಿ:2016, ದಿನಾಂಕ: 05.01.2017.
9. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:159:ಆರ್‌ಆರ್‌ಸಿ:2016, ದಿನಾಂಕ: 12.01.2017.
10. ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ:159:ಆರ್‌ಆರ್‌ಸಿ:2016, ದಿನಾಂಕ: 16.01.2017.
11. ಸರ್ಕಾರದ ತಿದ್ದುಪಡಿ ಆದೇಶ ಸಂಖ್ಯೆ:ಗ್ರಾಅಪ:159: ಆರ್‌ಆರ್‌ಸಿ:2016, ದಿನಾಂಕ: 19.01.2017.
12. ಕಂದಾಯ ಇಲಾಖೆಯ ಅನಧಿಕೃತ ಟಿಪ್ಪಣಿ ಪತ್ರ ಸಂಖ್ಯೆ: ಆರ್‌ಡಿ:04:ಟಿಎಸ್‌ವೈ:2016 ದಿನಾಂಕ 23.01.2017.

**ಪ್ರಸ್ತಾವನೆ:**

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ತೀವ್ರವಾದ ಬರಗಾಲ ಮುಂದುವರೆದಿರುವುದರಿಂದ, ಮೇಲೆ ಓದಲಾದ-5, 6 ಮತ್ತು 7ರಲ್ಲಿ ಕಂದಾಯ ಇಲಾಖೆಯು ಹೊರಡಿಸಿದ ಆದೇಶಗಳಲ್ಲಿ ರಾಜ್ಯದ 139 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಘೋಷಣೆ ಮಾಡಿರುತ್ತದೆ. ಅಲ್ಲದೆ ಬರ ಪೀಡಿತ ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಬಹುತೇಕ ಜಲ ಮೂಲಗಳಲ್ಲಿ ಸಂಗ್ರಹಣೆ ಕುಸಿತಗೊಂಡು ಸಾಕಷ್ಟು ಕಡೆ ಜನ

ಹಾಗೂ ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸಿರುತ್ತದೆ. ಅದರಲ್ಲಿಯೂ ಕುಡಿಯುವ ನೀರಿನ ಪ್ರಮುಖ ಮೂಲವಾದ ಮಹತ್ವದ ಕೆರೆಗಳು ಬತ್ತಿ ಹೋಗಿರುವುದು ಸಮಸ್ಯೆಯನ್ನು ಮತ್ತಷ್ಟು ಜಟಿಲಗೊಳಿಸಿದೆ. ಈ ಸನ್ನಿವೇಶದಲ್ಲಿ ಕೆರೆ ಸಂಜೀವಿನಿ ಕಾರ್ಯಕ್ರಮವನ್ನು ಪುನ: ಮುಂದುವರೆಸಿ ಉಪಯುಕ್ತ ಕೆರೆಗಳ ಹೂಳೆತ್ತುವ ಕೆಲಸವನ್ನು ಆದ್ಯತೆಯ ಮೇಲೆ ತೆಗೆದುಕೊಂಡು ಮಳೆಗಾಲ ಪ್ರಾರಂಭವಾಗುವ ಮುನ್ನವೇ ಪೂರ್ಣಗೊಳಿಸಿದಲ್ಲಿ ಮಾತ್ರ ಮಳೆಗಾಲದಲ್ಲಿ ಕೆರೆಗಳಿಗೆ ನೀರು ಸಂಗ್ರಹಣೆಗೊಂಡು ಕೆರೆಯ ನೀರಿನ ಸಂಗ್ರಹಣಾ ಸಾಮರ್ಥ್ಯ ವೃದ್ಧಿಯಾಗುತ್ತದೆ ಮತ್ತು ಬರಗಾಲವನ್ನು ಸಮರ್ಥವಾಗಿ ನಿಭಾಯಿಸಲು ಸಹಕಾರಿಯಾಗುತ್ತದೆ. ಅದಕ್ಕಾಗಿ ಕೆರೆ ಸಂಜೀವಿನಿ-2 ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ. ಹಾಗೂ

ಮುಖ್ಯ ಅಭಿಯಂತರರು , ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಇವರು ನೀಡಿದ ವರದಿಯಂತೆ ಕೆರೆ ಸಂಜೀವಿನಿ-1 ರ ಕಾರ್ಯಕ್ರಮದಡಿ ಅನುಮೋದನೆಗೊಂಡು ಇನ್ನೂ ಆರಂಭಗೊಳ್ಳದಿರುವ 172 ಕೆರೆಗಳನ್ನು ರೂ.9.32 ಕೋಟಿಗಳ ಮೊತ್ತದಲ್ಲಿ ಹಾಗೂ ಕೆರೆ ಸಂಜೀವಿನಿ-1 ರ ಕಾರ್ಯಕ್ರಮದಡಿ ಆರಂಭಗೊಂಡು ಪ್ರಗತಿಯಲ್ಲಿರುವ 179 ಕೆರೆಗಳನ್ನು ರೂ.12.44 ಕೋಟಿಗಳ ಮೊತ್ತವೂ ಸೇರಿ ಒಟ್ಟು ರೂ.21.76 ಕೋಟಿಗಳಲ್ಲಿ ಕೆರೆ ಸಂಜೀವಿನಿ-2 ಕಾರ್ಯಕ್ರಮದಡಿ ಕೈಗೆತ್ತಿಕೊಳ್ಳುವ ಅವಶ್ಯವಿರುತ್ತದೆ ಮತ್ತು ಹೊಸದಾಗಿ ಆಯ್ಕೆ ಮಾಡುವ ಕೆರೆಗಳನ್ನು ರೂ.28.24 ಕೋಟಿಗಳ ಮೊತ್ತದಲ್ಲಿ ಹೊಸದಾಗಿ ಕೆರೆಗಳ ಹೂಳೆತ್ತುವ ಕಾಮಗಾರಿಗಳನ್ನು ಕೈಗೆತ್ತಿಕೊಂಡು ಕೆರೆ ಸಂಜೀವಿನಿ-2 ಕಾರ್ಯಕ್ರಮವನ್ನು ಜಾರಿಗೆ ತರಲು ತೀರ್ಮಾನಿಸಿದೆ. "ಕೆರೆ ಸಂಜೀವಿನಿ-2" ಯೋಜನೆಯಡಿ ತುರ್ತಾಗಿ ಕಾಲಮಿತಿಯೊಳಗೆ ಕೈಗೊಳ್ಳಲು ಕೆರೆಗಳ ಹೂಳೆತ್ತುವ ಕಾರ್ಯಕ್ರಮಗಳನ್ನು ಜೆ.ಸಿ.ಬಿ.ರೀತಿಯ ಯಂತ್ರೋಪಕರಣಗಳನ್ನು ಬಳಸಲು ಷರತ್ತುಬದ್ಧ ಅನುಮತಿಯನ್ನು ನೀಡಲಾಗಿರುತ್ತದೆ.

ಪ್ರಸ್ತುತ ಕೆರೆ ಸಂಜೀವಿನಿ-1 ಮತ್ತು 2 ರಡಿ ಪೂರ್ಣಗೊಳಿಸಿರುವ ಹಾಗೂ ಪ್ರಗತಿಯಲ್ಲಿರುವ ಕೆರೆ ಹೂಳೆತ್ತುವ ಕಾಮಗಾರಿಗಳ ಬಿಲ್ ಪಾವತಿಸಲು ಬ್ಯಾಂಕ್ ಖಾತೆ ನೀಡಿದ ಜಿಲ್ಲೆಗಳಿಗೆ ಅನುಬಂಧದಲ್ಲಿರುವಂತೆ ರೂ.963.00 ಲಕ್ಷಗಳನ್ನು ಬಿಡುಗಡೆ ಮಾಡಲು ಸರ್ಕಾರವು ತೀರ್ಮಾನಿಸಿರುತ್ತದೆ. ಪ್ರಯುಕ್ತ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ : 159 : ಆರ್‌ಆರ್‌ಸಿ : 2016, ದಿನಾಂಕ: 27-01-2017.**

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ರಾಜ್ಯದಲ್ಲಿನ ತೀವ್ರ ಬರ ಪರಿಸ್ಥಿತಿಯನ್ನು ನಿಭಾಯಿಸಲು ಉಪಯುಕ್ತ ಕೆರೆಗಳ ಹೂಳೆತ್ತಲು "ಕೆರೆ ಸಂಜೀವಿನಿ" ಯೋಜನೆಗೆ ರಾಜ್ಯ ವಿಪತ್ತು ನಿರ್ವಹಣೆ ನಿಧಿಯಿಂದ ನೀಡಿರುವ ಅನುದಾನದಲ್ಲಿ ಜಿಲ್ಲಾ ಪಂಚಾಯತಿಗಳಲ್ಲಿ ಕೆರೆ ಸಂಜೀವಿನಿ-1 ಮತ್ತು 2 ರ ಯೋಜನೆಯಡಿ ಪ್ರಗತಿ ಹೊಂದಿ ಪೂರ್ಣಗೊಳಿಸಿರುವ ಕೆರೆ ಹೂಳೆತ್ತುವ ಕಾಮಗಾರಿಗಳ ಬಿಲ್ ಪಾವತಿಸಲು ಬ್ಯಾಂಕ್ ಖಾತೆ ವಿವರ ನೀಡಿದ ಜಿಲ್ಲಾ ಪಂಚಾಯತಿಗಳಿಗೆ ಅನುಬಂಧದಲ್ಲಿರುವಂತೆ ರೂ.963.00 (ರೂಪಾಯಿಗಳು ಒಂಭೈನೂರ ಅರವತ್ಮೂರು ಲಕ್ಷಗಳು ಮಾತ್ರ) ಲಕ್ಷಗಳನ್ನು ಕೆಳಕಂಡ ಷರತ್ತುಗಳಿಗೊಳಪಟ್ಟು ಬಿಡುಗಡೆ ಮಾಡಲು ಸರ್ಕಾರವು ಹರ್ಷಿಸುತ್ತದೆ.

**<u>ಷರತ್ತುಗಳು:-</u>**

1. ಈ ಅನುದಾನವನ್ನು ಕೆರೆ ಸಂಜೀವಿನಿ ಯೋಜನೆಯಡಿ ಅನುಮೋದನೆಯಾಗಿ ಪೂರ್ಣಗೊಳಿಸಿದ ಕೆರೆ ಹೂಳೆತ್ತುವ ಕಾಮಗಾರಿಗಳ ಬಿಲ್ ಪಾವತಿಗೆ ಮಾತ್ರ ವಿನಿಯೋಗಿಸತಕ್ಕದ್ದು. ಬೇರೆ ಯಾವುದೇ ಕಾಮಗಾರಿಗಳಿಗೆ ವಿನಿಯೋಗಿಸತಕ್ಕದ್ದಲ್ಲ.
2. ಬಿಲ್ಲುಗಳನ್ನು ಪಾವತಿಸುವ ಸಂದರ್ಭದಲ್ಲಿ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಕೆರೆ ಸಂಜೀವಿನಿಯ ಪ್ರಗತಿಯ ವರದಿಗಳು, ಬಿಲ್ ವಿವರಗಳನ್ನು ಕಡ್ಡಾಯವಾಗಿ ನಮೂದಿಸಿಯೇ ಪಾವತಿ ಮಾಡತಕ್ಕದ್ದು.

3. ಈ ಯೋಜನೆಯಡಿ ಬಿಡುಗಡೆ ಮಾಡಿದ ಅನುದಾನವನ್ನು ಕೆರೆ ಹೂಳೆತ್ತುವ ಕಾಮಗಾರಿಗಳಿಗೆ ಜೆಸಿಬಿ ಯಂತಹ ಯಂತ್ರಗಳನ್ನು ಪ್ರತಿ ಗಂಟೆಗೆ ಬಾಡಿಗೆ ಆಧಾರದ ಮೇಲೆ ಪಡೆದುಕೊಂಡಂತಹ ವೆಚ್ಚಗಳನ್ನು ಮಾತ್ರ ಭರಿಸುವುದು. ಯಾವುದೇ ಕಾರಣಕ್ಕೂ ಕೆರೆ ಹೂಳು ಸಾಗಾಣಿಕೆ ವೆಚ್ಚವನ್ನು ಭರಿಸತಕ್ಕದ್ದಲ್ಲ.
4. ಆಯಾ ಜಿಲ್ಲೆಗಳಿಗೆ ಸಂಬಂಧಿಸಿದ ಪರಿವೀಕ್ಷಣಾ ವರದಿ, ಕಾಮಗಾರಿ ಸ್ಥಳದಲ್ಲಿ ಕಾರ್ಯಪಾಲಕ/ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರು ಪರಿವೀಕ್ಷಣೆ ಮಾಡುತ್ತಿರುವ ಮೂರು ಹಂತದ ಫೋಟೋಗಳನ್ನು ಹಾಗೂ ವಿಡಿಯೋ ಚಿತ್ರೀಕರಣ ಮಾಡಿರುವುದನ್ನು ದಾಖಲಿಸಿ ಇಟ್ಟುಕೊಂಡಿರುವುದನ್ನು ಪರಿಶೀಲಿಸಿ, ಕಾಮಗಾರಿ ಗುಣಮಟ್ಟದ ಬಗ್ಗೆ ದೃಢಪಡಿಸಿಕೊಂಡು ಪಾವತಿ ಮಾಡತಕ್ಕದ್ದು.
5. ಬಳಕೆಯಾದ ಹಣ ಮತ್ತು ಕಾಮಗಾರಿ ಪ್ರಗತಿ ವರದಿಯನ್ನು ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ರವರ ಮುಖಾಂತರ ಪ್ರತಿ ಮಾಹೆ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
6. ಸದರಿ ಅನುದಾನಕ್ಕೆ ಹಣ ಬಳಕೆ ಪ್ರಮಾಣ ಪತ್ರವನ್ನು ಜಿಲ್ಲಾ ಪಂಚಾಯತಿಯಿಂದ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.
7. ಜಿಲ್ಲಾ ಪಂಚಾಯತಿಗಳು ಮುಂದಿನ ಕಂತಿನ ಅನುದಾನ ಬೇಡಿಕೆ ಸಲ್ಲಿಸುವ ಮುನ್ನ ಈ ಆದೇಶದಲ್ಲಿ ಬಿಡುಗಡೆ ಮಾಡಿದ ಪೂರ್ಣ ಅನುದಾನವನ್ನು ಕಡ್ಡಾಯವಾಗಿ ವೆಚ್ಚ ಭರಿಸತಕ್ಕದ್ದು ಹಾಗೂ ಉಪಯುಕ್ತತಾ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು. ಇಲ್ಲದಿದ್ದಲ್ಲಿ ಮುಂದಿನ ಕಂತಿನ ಅನುದಾನ ಬಿಡುಗಡೆ ಮಾಡಲಾಗುವುದಿಲ್ಲ.
8. ಈ ಆದೇಶದಲ್ಲಿ ಬಿಡುಗಡೆಯಾಗಿ ನೀವು ನೀಡಿದ ಬ್ಯಾಂಕ್ ಖಾತೆಗೆ ವರ್ಗಾವಣೆಯಾದ ಕೆರೆ ಸಂಜೀವಿನಿ ಅನುದಾನವನ್ನು ಅನುಷ್ಠಾನ ಸಂಸ್ಥೆಯಾದ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳಿಗೆ ವಿಳಂಭಕ್ಕೆ ಅವಕಾಶವಿಲ್ಲದೆ ಬಿಡುಗಡೆ ಮಾಡತಕ್ಕದ್ದು.

ಈ ಆದೇಶವನ್ನು ಆಂತರಿಕ ಆರ್ಥಿಕ ಸಲಹೆಗಾರರ ಟಿಪ್ಪಣಿ ಕಂಡಿಕೆ ಸಂಖ್ಯೆ:ಗ್ರಾಅಪ:501:ವೆಚ್ಚ-6:2016 ದಿನಾಂಕ:29-11-2016ರನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:**
1. ಎಲ್ಲಾ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಗ್ರಾಮೀಣಾಭಿವೃದ್ಧಿ ಭವನ, 2ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-9.
3. ಎಲ್ಲಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವೃತ್ತಗಳ ಅಧೀಕ್ಷಕ ಅಭಿಯಂತರರು.
4. ಎಲ್ಲಾ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗಗಳ ಕಾರ್ಯಪಾಲಕ ಅಭಿಯಂತರರು.
5. ಸಹಾಯಕ ವ್ಯವಸ್ಥಾಪಕರು, ಎಸ್.ಬಿ.ಎಮ್, ಜಿ-ಸೇವಾ ಶಾಖೆ, ಎಲ್.ಸಿ.ರೋಡ್, ಶಿವಾಜಿನಗರ, ಬೆಂಗಳೂರು ಇವರಿಗೆ, ಕಳುಹಿಸುತ್ತಾ ಉಳಿತಾಯ ಖಾತೆ ಸಂಖ್ಯೆ: 64173862925

ಅನುಬಂಧದಲ್ಲಿರುವಂತೆ ಜಿಲ್ಲಾ ಪಂಚಾಯತಿಗಳ ಬ್ಯಾಂಕ್ ಖಾತೆಗಳಿಗೆ ಹಣವನ್ನು ವರ್ಗಾಯಿಸಿರುವುದರಿಂದ ಮತ್ತು ಸಂಬಂಧಪಟ್ಟ ಜಿಲ್ಲಾ ಮಟ್ಟದ ಅನುಷ್ಠಾನಾಧಿಕಾರಿಗಳ ಖಾತೆಗೆ ಹೊಂದಾಣಿಕೆಯಾಗದೆ ಹಿಂತಿರುಗಿ ಬಂದಲ್ಲಿ ಕೂಡಲೇ ವಿವರಗಳನ್ನು ನಿರ್ದೇಶಕರು, ಸುವರ್ಣ ಗ್ರಾಮೋದಯ ಯೋಜನೆ ರವರ ಗಮನಕ್ಕೆ ತರುವುದು.

**ಪ್ರತಿಯನ್ನು ಮಾಹಿತಿಗಾಗಿ:**

1. ಮಹಾಲೇಖಪಾಲರು (ಲೆಕ್ಕಪತ್ರ) ಕರ್ನಾಟಕ, ಬೆಂಗಳೂರು
2. ಮಹಾಲೇಖಪಾಲರು (ಆಡಿಟ್-1&2) ಕರ್ನಾಟಕ, ಬೆಂಗಳೂರು
3. ಮಾನ್ಯ ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ಮುಖ್ಯ ಮಂತ್ರಿಗಳ ಕಾರ್ಯಾಲಯ, ವಿಧಾನ ಸೌಧ, ಬೆಂಗಳೂರು.
4. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
5. ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ ಅಭಿವೃದ್ಧಿ ಆಯುಕ್ತರು, ವಿಧಾನ ಸೌಧ,ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, (ಪಿಎಂಯು) (ಐಎಫ್) 5ನೇ ಹಂತ, ಬಹುಮಹಡಿ ಕಟ್ಟಡ, ಬೆಂಗಳೂರು.
8. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
9. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಇವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
10. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
11. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ರವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು
12. ಆಯುಕ್ತರು, ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
13. ಸರ್ಕಾರದ ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಬಹುಮಹಡಿ ಕಟ್ಟಡ, ಬೆಂಗಳೂರು
14. ವಿಶೇಷಾಧಿಕಾರಿಗಳು,(ಜಿ.ಪಂ) ಮತ್ತು ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿಗಳು,ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
15. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಇಲಾಖೆ, ಬಹುಮಹಡಿ ಕಟ್ಟಡ,ಬೆಂಗಳೂರು.
16. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
17. ಅಧೀನ ಕಾರ್ಯದರ್ಶಿ, ವೆಚ್ಚ-6, ಜಿ.ಪಂ. ಆರ್ಥಿಕ ಇಲಾಖೆ, ಬೆಂಗಳೂರು.
18. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
19. ಮಾಹಿತಿ ಕೇಂದ್ರಕ್ಕೆ(10 ಪ್ರತಿಗಳು)
20. ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

| ಅನುಬಂಧ | | | | | |
|---|---|---|---|---|---|
| ಕೆರೆ ಸಂಜೀವಿನಿ ರಡಿ ಬ್ಯಾಂಕ್ ಖಾತೆಗಳಿಗೆ ಅನುದಾನ ಬಿಡುಗಡೆ ಮಾಡಿದ ವಿವರ | | | | | |
| ಕ್ರಸಂ | ಜಿಲ್ಲೆ | ಬ್ಯಾಂಕ್ ಹೆಸರು | ಬ್ಯಾಂಕ್ ಖಾತೆ ಸಂಖ್ಯೆ | ಐಎಫ್‌ಎಸ್‌ಸಿ ಕೋಡ್ ಸಂಖ್ಯೆ | ಬಿಡುಗಡೆಯಾದ ಮೊತ್ತ (ರೂ.ಲಕ್ಷಗಳಲ್ಲಿ) |
| 1 | ಬಾಗಲಕೋಟೆ | SBI BAGALKOTE | 11029261255 | SBIN0000812 | 35.00 |
| 2 | ಬೆಂಗಳೂರು (ಗ್ರಾ) | State Bank of India, Sheshadripuram, Bangalore. | 10323665035 | SBIN0001626 | 35.00 |
| 3 | ಬೆಂಗಳೂರು (ನ) | State Bank of India, Sheshadripuram Branch, Bangalore | 10323665035 | SBIN0001626 | 35.00 |
| 4 | ಬೆಳಗಾವಿ | SYNDICATE BANK,KRCC BRANCH, BELAGAVI | 05342010014858 | SYNB0000534 | 35.00 |
| 5 | ಬಳ್ಳಾರಿ | SYNDICATE BANK, ZP BRANCH BELLARY | 06232210006513 | SYNB0000623 | 35.00 |
| 6 | ಬೀದರ್ | CANARA BANK BRANCH, BIDAR | 0448101060261 | CNRB0000448 | 35.00 |
| 7 | ವಿಜಯಪುರ | KARNATAKA VIKASA GRAMEENA BANK VIJAYAPUR | 89037344132 | KVGB0003111 | 35.00 |
| 8 | ಚಾಮರಾಜನಗರ | SBM MAIN BRANCH CHAMARAJANAGAR | 54013085901 | SBMY0040062 | 35.00 |
| 9 | ಚಿಕ್ಕಮಗಳೂರು | KAVERI GRAMIN BANK, ZP BRANCH, CHICKAMAGALUR | 1329002290-2 | SBMY0RRCKGB | 35.00 |
| 10 | ಚಿಕ್ಕಬಳ್ಳಾಪುರ | SBM, SHIDLAGATTA ROAD, ANAKANUR, CHICKBALLAPUR | 64024561509 | SBMY0041043 | 35.00 |
| 11 | ಚಿತ್ರದುರ್ಗ | SBM MAIN BRANCH CHITRADURGA | 54044357460 | SBMY0040109 | 35.00 |
| 12 | ದಾವಣಗೆರೆ | SBM MANDIPET DAVANAGERE | 54042043217 | SBMY0040108 | 35.00 |
| 13 | ಧಾರವಾಡ | SBM, HDMC CIRCLE, DHARWAD | 54045193077 | SBMY0040352 | 35.00 |
| 14 | ಗದಗ್ | SBI, GADAG | 10824830191 | SBIN0000838 | 35.00 |
| 15 | ಕಲಬುರ್ಗಿ | PRAGATHI KRISHNA GRAMIN BANK | 11001100001191 | PKGB0011001 | 35.00 |
| 16 | ಹಾವೇರಿ | SBM, HAVERI | 540337382189 | SBMY0040127 | 35.00 |
| 17 | ಹಾಸನ | IDBI, HASSAN | 0365104000148177/ 80122459 | IBKL0000365 | 35.00 |
| 18 | ಕೊಪ್ಪಳ | SBH KAJANE BRANCH ZILLA COMPLEX KOPPAL | 62471041620 | SBHY0020968 | 35.00 |
| 19 | ಕೋಲಾರ | CANARA BANK, KOLAR | 0539101031003 | CNRB0000539 | 35.00 |
| 20 | ಕೊಡಗು | VIJAYA BANK, MADIKERI BRANCH | 114701011003097 | VIJB0001147 | 35.00 |

| | | | | | |
|---|---|---|---|---|---|
| 21 | ಮಂಡ್ಯ | SBM MAIN BRANCH MANDYA | 64198810592 | SBMY0040035 | 35.00 |
| 22 | ಮೈಸೂರು | SBM KRISHNAMURTHYPURAM MYSORE | 64007875005 | SBMY0040056 | 35.00 |
| 23 | ರಾಮನಗರ | CANARA BANK RAMNAGAR | 0593101034733 | CNRB0000593 | 35.00 |
| 24 | ರಾಯಚೂರು | SBH MAIN BRANCH RAICHUR | 62470361855 | SBHY0020203 | 35.00 |
| 25 | ಶಿವಮೊಗ್ಗ | SBM | 54045619483 | SBMY0040132 | 35.00 |
| 26 | ತುಮಕೂರು | SBM, MAIN BRANCH, TUMKUR | 64018864148 | SBMY0040092 | 35.00 |
| 27 | ಉತ್ತರ ಕನ್ನಡ | SBI KARWAR | 10638097797 | SBIN0000857 | 35.00 |
| 28 | ಯಾದಗಿರಿ | AXIS BANK, YADAGIRI | 916010031273092 | UTIB0001201 | 18.00 |
| | ಒಟ್ಟು | | | | **963.00** |

(ಡಾ. ಬೂವನಹಳ್ಳಿ ನಾಗರಾಜ್)
ನಿರ್ದೇಶಕರು
ಸುವರ್ಣ ಗ್ರಾಮೋದಯ ಯೋಜನೆ ಹಾಗೂ
ಪದನಿಮಿತ್ತ ಸರ್ಕಾರದ ಉಪ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.